ಅಂಕೋಲ ತಾಲ್ಲೂಕಿನಲ್ಲಿ ಹೊಸ 110 ಕೆ.ವಿ. ಸ್ಟೇಷನ್‌ಪ್ರಾರಂಭ.

751 (785) ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ (ಅಂಕೋಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನಲ್ಲಿ ಹೊಸ 110 ಕೆ.ವಿ. ಸ್ಟೇಷನ್ ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದನ್ನು ಪ್ರಾರಂಭಿಸಲು ಸರ್ಕಾರದವರು ಕೈ ಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ110 ಕೆ.ವಿ. ಉಪ ಕೇಂದ್ರವನ್ನು ಸ್ಥಾಪಿಸಲು ಮಂಡಳಿಯ ತಾಂತ್ರಿಕ ಸಮಿತಿಯು ಮೇ 1996 ರಲ್ಲಿ ಅನುಮೋದನೆ ನೀಡಿದೆ. ಈ ಕಾಮಗಾರಿಯು ಆರ್.ಇ.ಸಿ. ಯೋಜನೆಯಲ್ಲಿ ಸೇರ್ಪಡೆಯಾಗಿದ್ದು, ಪ್ರಸಕ್ತ ಸಾಲಿನಲ್ಲಿ ಇದಕ್ಕೆ ಮಂಜೂರಾತಿ ದೊರಕಿರುತ್ತದೆ. ಭೂ ಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಈ ಉಪಕೇಂದ್ರದ ಸ್ಥಾಪನೆಗೆ ಬೇಕಾಗಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಈಗಾಗಲೇ ರೂ. 12. 1 ಲಕ್ಷ ಹಣವನ್ನು ಉಪ ವಿಭಾಗಾಧಿಕಾರಿ, ಕುಮಟಾರವರಲ್ಲಿ ಠೇವಣಿ ಇಡಲಾಗಿದೆ. ಭೂಮಿಯು ಮಂಡಳಿಯ ವಶಕ್ಕೆ ಬಂದ ನಂತರ ಪ್ರಾರಂಭಿಕ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯಲಾಗುವುದು

ಅಧ್ಯಕ್ಷರು : ಮಂಡಿಸಲಾಯಿತು. ಈಗ ಸದನವನ್ನು ಮುಂದೂಡಿ ಪುನಃ ಮಧ್ಯಾಹ್ನ 3.00 ಗಂಟೆಗೆ ನಾವು ಸಮಾವೇಶಗೊಳ್ಳಲಿದ್ದೇವೆ .

(ಸದನವು ಮಧ್ಯಾಹ್ನ 1 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆಗೆ 20 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು, ಅಧ್ಯಕ್ಷ ಪೀಠದಲ್ಲಿ ಉಪಾಧ್ಯಕ್ಷರು ಕುಳಿತಿದ್ದರು)

ಶ್ರೀ ವಾಟಾಳ್ ನಾಗರಾಜ್:ಮಾನ್ಯ ಉಪಾಧ್ಯಕ್ಷರೆ, ಆಡಳಿತ ಪಕ್ಷದವರದ್ದು ಮತ್ತೆ ಅದೇ ರಾಗವಾಗಿದೆ. ಸದನದಲ್ಲಿ ಮಂತ್ರಿಗಳು ಹಾಜರಿಲ್ಲ. ನಾವೂ ಕೂಡ ಎಷ್ಟು ಬಾರಿ ಹೇಳುವುದು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು): ಬೆಳಿಗ್ಗೆ ಹೇಳಿರುವುದೇ ಸಾಕು ಬಿಡಿ.

5. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರಹಳ್ಳಿ ವಿಧಾನ ಸಭಾ ಕ್ಷೇತ್ರ): ಮಾನ್ಯ ಉಪಾಧ್ಯಕ್ಷ ರೆ, ಮೊದಲನೆಯದಾಗಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಸರಗೂರು ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀಯುತ ನಂಜುಂಡಸ್ವಾಮಿ, ಮಾಜಿ ಪೋಲೀಸ್ ಪೇದೆ,

ಇವರನ್ನು ಕಡ್ಡಾಯ ನಿವೃತ್ತಿಗೊಳಿಸಿದ್ದು ಪುನರ್‌ನೇಮಕ ಮಾಡುವ ಬಗ್ಗೆ ಮತ್ತು ಎರಡನೆಯ ಅರ್ಜಿಯಾದ ಕೊಳ್ಳೇಗಾಲ ತಾಲ್ಲೂಕಿನ ಮಧುವನ ಹಳ್ಳಿಯ ಶ್ರೀಎಸ್. ಬಾಬುರವರಿಗೆ ಅನುಕಂಪ ಆಧಾರದ ಮೇಲೆ ನೇಮಕಾತಿ ನೀಡುವ ಬಗ್ಗೆ ಇರುವ ಅರ್ಜಿಗಳನ್ನು ಸದನದ ಮುಂದೆ ತಮ್ಮ ಅನುಮತಿ ಪಡೆದು ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು: ಶ್ರೀ ಸಿ.ಎಂ. ಲಿಂಗಪ್ಪನವರ ಹೆಸರಿನಲ್ಲಿರುವ ಅರ್ಜಿಯಾದ ಚಿತ್ರದುರ್ಗದ ಅಕ್ಕಮಹಾದೇವಿ ಸಮಾಜ ರಸ್ತೆಯಲ್ಲಿರುವ ಕೋಮಲ ನರ್ಸಿಂಗ್ ಹೋಮ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಡಾ|| ಕೋಮಲ ಪಿ.ಹೆಚ್. ಇವರು ಈ ಹಿಂದೆ ಸರ್ಕಾರದ ವಸತಿ ಗೃಹದಲ್ಲಿ ವಾಸಮಾಡುತ್ತಿದ್ದ ಸಂದರ್ಭದಲ್ಲಿ ವಿಧಿಸಲಾದ ದಂಡರೂಪದ ಬಾಡಿಗೆಯನ್ನು ಬಿಡುವ ಕುರಿತು ಇರುವ ಅರ್ಜಿಯನ್ನು ಸದನಕ್ಕೆ ನಾನೇ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು:- ಅರ್ಜಿಗಳನ್ನು ಒಪ್ಪಿಸಲಾಯಿತು.

6. ವರದಿಗಳನ್ನೊಪ್ಪಿಸುವುದು.

ಉಪಾಧ್ಯಕ್ಷರು: ಶ್ರೀಎಂ.ಚಂದ್ರಪ್ಪನವರ ಪರವಾಗಿ ನಾನೇ ಅಧೀನ ಶಾಸನ ರಚನಾ ಸಮಿತಿಯ 24ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ (ಬಾದಾಮಿ ವಿಧಾನಸಭಾ ಕ್ಷೇತ್ರ): ಮಾನ್ಯ ಉಪಾಧ್ಯಕ್ಷರೆ, ಶ್ರೀ ಹೆಚ್.ಕೆ.ಕುಮಾರಸ್ವಾಮಿ ಪರವಾಗಿ ಸಭೆಯ ಮುಂದಿಡಲಾದ ರಾಗದ ಪತ್ರಗಳ ಸಮಿತಿಯ 1998-99ನೇ ಸಾಲಿನ 17ನೇ ವರದಿಯನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು: ವರದಿಗಳನ್ನೊಪ್ಪಿಸಲಾಯಿತು.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು.

ಅ) ಬೆಳಗಾವಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ .

ಶ್ರೀ ಚಂದ್ರಶೇಖರ ನಾಯಕ್(ಗೋಕಾಕ್ ವಿಧಾನಸಭೆ ಕ್ಷೇತ್ರ): ಮಾನ್ಯ ಉಪಾಧ್ಯಕ್ಷರೆ, ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕುಡಿಯುವುದಕ್ಕೆ ನೀರಿಲ್ಲವಾಗಿದೆ. ಹಲವಾರು ಗ್ರಾಮಗಳಲ್ಲಿ ತೆಗೆದ ಬೋರವೆಲ್‌ಗಳಿಗೆ ಹೋದ ವರ್ಷ ಕೂಡ ಹಣ ಕೊಟ್ಟಿಲ್ಲ ಮತ್ತು ಈ ವರ್ಷವು ಕೂಡ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಜಿಲ್ಲಾಮಂತ್ರಿಗಳು 27ನೇ ತಾರೀಖು ಕುಡಿಯುವ ನೀರಿನ ಸಲುವಾಗಿ ಮಿಟಿಂಗ್ ಮಾಡುತ್ತಿದ್ದಾರೆ. ಆದರೆ ಅಲ್ಲಿ ಕೇಳಿದರೆ ಕೊಡುವುದಕ್ಕೆ ದುಡ್ಡಿಲ್ಲ. ಈಗ ಗೋಕಾಕ್ ತಾಲ್ಲೂಕಿನ ಮಲ್ಲಾಪುರ,ಚಿಲ್ಕಿಬಾವಿ, ಮಕ್ಕಳಗೇರಿ, ಕಡಬಗಟ್ಟಿ, ಈ ಎಲ್ಲಾ ಗ್ರಾಮಕ್ಕೂ ನೀರೂ ಇಲ್ಲ, ಬೋರ್‌ಗಾಡಿಯೂ ಕೂಡ ಬಂದಿಲ್ಲ. ಹೀಗಾದರೆ ಕುಡಿಯುವ ನೀರಿನ ಪರಿಸ್ಥಿತಿ ಹೇಗೆ ಎಂಬುದನ್ನೂ ವಿಚಾರ ಮಾಡಬೇಕು. ನೀರು ಬೇಕೆಂದು ಅಲ್ಲಿ ದುಡ್ಡಿಲ್ಲ, ದುಡ್ಡಿಲ್ಲದಿದ್ದರೆ ಅಲ್ಲಿಗೆ ನೀರಿಲ್ಲ. ಹೀಗಿರುವಾಗ ಕುಡಿಯುವ ನೀರಿಗೆ ಯಾವ ರೀತಿಯಾಗಿ ವ್ಯವಸ್ಥೆಯನ್ನು ಮಾಡುತ್ತೀರಿ ?